KACD310009712015

**ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ,ಹಿರಿಯೂರು .**

ಉಪಸ್ಥಿತರುಃ ಶ್ರೀಮತಿ. ಸುಜಾತ ಸುವರ್ಣ ಬಿ,

ಬಿ.ಕಾಂ., ಎಲ್.ಎಲ್.ಬಿ.,

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,

ಹಿರಿಯೂರು, ಚಿತ್ರದುರ್ಗ ಜಿಲ್ಲೆ.

ಅಸಲು ದಾವಾ ಸಂಖ್ಯೆ 49/2015

ದಿನಾಂಕಃ 3 ನೇ ಜುಲೈ – 2026.

ವಾದಿಯರು ಃ

1.ಅಬ್ದುಲ್ ಖಾದರ್
ಬಿನ್ ಲೇಟ್ ರಜಾಕ್ ಸಾಬ್ ,
ವಯಸ್ಸುಃ ಸುಮಾರು 42 ವರ್ಷ,

2.ಬುಡೇನ್ ಸಾಬ್
ಬಿನ್ ಲೇಟ್ ರಜಾಕ್ ಸಾಬ್ ,
ವಯಸ್ಸುಃ ಸುಮಾರು 57 ವರ್ಷ,

3. ಫಕ್ರುದ್ದೀನ್ ಸಾಬ್
ಬಿನ್ ಲೇಟ್ ರಜಾಕ್ ಸಾಬ್ ,
ವಯಸ್ಸುಃ ಸುಮಾರು 47 ವರ್ಷ,

4. ಮುಮ್ತಾಜ್
ಕೋಂ ವಜೀರ್ ಸಾಬ್,
ವಯಸ್ಸುಃ ಸುಮಾರು 55 ವರ್ಷ,

SUJATHA SUVARNA B

Digitally signed by SUJATHA SUVARNA B
Date: 2026.07.04 19:19:23 +0530

5. ಮೊಹಸೀನ್
ಬಿನ್ ವಜೀರ್ ಸಾಬ್,
ವಯಸ್ಸುಃ ಸುಮಾರು 34 ವರ್ಷ

6. ತಹಸೀನ
ಬಿನ್ ವಜೀರ್ ಸಾಬ್,
ವಯಸ್ಸುಃ ಸುಮಾರು 32 ವರ್ಷ

7. ನಜ್ರತ್
ಬಿನ್ ವಜೀರ್ ಸಾಬ್,
ವಯಸ್ಸುಃ ಸುಮಾರು 30 ವರ್ಷ

8. ಜಬೀನಾ
ಬಿನ್ ವಜೀರ್ ಸಾಬ್,
ವಯಸ್ಸುಃ ಸುಮಾರು 30 ವರ್ಷ

9. ಸಲ್ಮಾ
ಬಿನ್ ವಜೀರ್ ಸಾಬ್,
ವಯಸ್ಸುಃ ಸುಮಾರು 25 ವರ್ಷ

10. ಗುಲಾಬ್
ಬಿನ್ ವಜೀರ್ ಸಾಬ್,
ವಯಸ್ಸುಃ ಸುಮಾರು 21 ವರ್ಷ

ಎಲ್ಲರ ವಾಸಃ ಅಮರಾಪುರ
ಅನಂತಪುರ ಜಿಲ್ಲೆ , ಆಂಧ್ರಪ್ರದೇಶ

ಹಿಂದಿನ ವಾಸಃ ಖಂಡೇನಹಳ್ಳಿ ,
ಧರ್ಮಪುರ ಹೋಬಳಿ, ಹಿರಿಯೂರು ತಾ

(ವಾದಿಯರ ಪರ ಃ ಶ್ರೀ ಜಿ .ಸಿ.ಎಮ್ , ವಕೀಲರು)

-ವಿರುದ್ಧ-

ಪ್ರತಿವಾದಿಯರುಃ

1. ನಿಂಗಮ್ಮ ,
ಕೋಂ ಲೇಟ್ ಲಿಂಗೇಗೌಡ
ವಯಸ್ಸುಃ ಸುಮಾರು 67 ವರ್ಷ,
(ತೀರಿಕೊಂಡಿರುತ್ತಾರೆ)

2. ಎಲ್ ಶಿವಕುಮಾರ್
ಬಿನ್ ಲೇಟ್ ಲಿಂಗೇಗೌಡ ,
ವಯಸ್ಸುಃ ಸುಮಾರು 45 ವರ್ಷ,

3. ನಾಗರಾಜ
ಬಿನ್ ಲೇಟ್ ಲಿಂಗೇಗೌಡ ,
ವಯಸ್ಸುಃ ಸುಮಾರು 27 ವರ್ಷ,

4. ರವಿಕುಮಾರ
ಬಿನ್ ಲೇಟ್ ಲಿಂಗೇಗೌಡ ,
ವಯಸ್ಸುಃ ಸುಮಾರು 35 ವರ್ಷ,

5. ಕೆ .ಎಲ್ ವಿರುಪಾಕ್ಷ
ಬಿನ್ ಲೇಟ್ ಲಿಂಗೇಗೌಡ ,
ವಯಸ್ಸುಃ ಸುಮಾರು 32 ವರ್ಷ,

6. ಹನುಮಂತರಾಯ
ಬಿನ್ ಲೇಟ್ ಚನ್ನಪ್ಪ ,

7. ಭೀಮಣ್ಣ
ಬಿನ್ ಲೇಟ್ ಚನ್ನಪ್ಪ ,
ವಯಸ್ಸುಃ ಸುಮಾರು 51 ವರ್ಷ,

8. ಕೃಷ್ಣಪ್ಪ
ಬಿನ್ ಲೇಟ್ ಚನ್ನಪ್ಪ ,
ವಯಸ್ಸುಃ ಸುಮಾರು 44 ವರ್ಷ,

ಎಲ್ಲರ ವಾಸಃ ಖಂಡೇನಹಳ್ಳಿ ಗ್ರಾಮ,
ಧರ್ಮಪುರ ಹೋಬಳಿ ,
ಹಿರಿಯೂರು ತಾಲೂಕು,
(1 ಮತ್ತು 8 ನೇ ಪ್ರತಿವಾದಿಯರ ಪರಃ ಶ್ರೀ ಎಸ್ ಜೆ ವಕೀಲರು)

| | | |
|---|---|---|
| ದಾವೆ ಸ್ವರೂಪ | ಃ | ಮಾಲೀಕತ್ವದ ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ |
| ದಾವೆ ಸಲ್ಲಿಸಿದ ದಿನಾಂಕ | ಃ | 26.10.2015 |
| ಸಾಕ್ಷಿಯ ವಿಚಾರಣೆ ದಿನಾಂಕ | ಃ | 13.02.2020 |
| ತೀರ್ಪು ಘೋಷಿಸಿದ ದಿನಾಂಕ | ಃ | 03.07.2026 |
| ಒಟ್ಟು ಅವಧಿ | ಃ | ವರ್ಷ ತಿಂಗಳು ದಿನಗಳು<br>10 08 07 |

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು .

**ತೀರ್ಪು**

ವಾದಿಯು ದಾವಾ ಆಸ್ತಿಗೆ ಸಂಪೂರ್ಣ ಮತ್ತು ಕಾನೂನು ಬದ್ಧ ಮಾಲೀಕರಾಗಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿದ್ದಾರೆಂದು ಮತ್ತು ದಾವಾಸ್ತಿಗೆ ಪ್ರತಿವಾದಿಯರಾಗಲೀ ಅವರ ಪ್ರತಿನಿಧಿಯರಾಗಲೀ, ಅಧಿಕಾರಪತ್ರ ಹೊಂದಿದವರಾಗಲೀ ಅವರ ಪರ ಕಾರ್ಯ ನಿರ್ವಹಿಸುವವರಾಗಲೀ ದಾವಾ ಆಸ್ತಿಯಲ್ಲಿ ವಾದಿಯರ ಶಾಂತಿಯುತ ಸ್ವಾಧೀನ ಮತ್ತು ಅನುಭವಕ್ಕೆ ಅಡ್ಡಿ ಪಡಿಸದಂತೆ ಮತ್ತು ದಾವಾಸ್ತಿಯ ಅತಿಕ್ರಮ ಮಾಡದಂತೆ ಶಾಶ್ವತ

ನಿರ್ಭಂದಾಕಾಜ್ಞೆಯನ್ನು ನೀಡಬೇಕೆಂದು ಹಾಗೂ ಮತ್ತು ಇತರ ಸೂಕ್ತ ಸಂದರ್ಭೋಚಿತ ಪರಿಹಾರವನ್ನು ಕೊಡಿಸಬೇಕೆಂದು ಕೋರಿಕೊಂಡಿರುತ್ತಾರೆ.

2. ದಾವಾ ಶೆಡ್ಯೂಲ್ ಆಸ್ತಿಗಳ ವಿವರಗಳು ಈ ಕೆಳಕಂಡಂತಿವೆಃ-

ಹಿರಿಯೂರು ತಾಲ್ಲೂಕಿನ ಖಂಡೇನಹಳ್ಳಿ ಗ್ರಾಮದಲ್ಲಿ ಇರುವಂತಹ ಸರ್ವೇ ನಂ.161/1 ಡಿಪಿ ಯಲ್ಲಿ 4 ಎಕರೆ ಮತ್ತು ಸರ್ವೇ ನಂ 161/1 ಬಿ ರಲ್ಲಿ 5 ಎಕರೆ 8 ಗುಂಟೆ

ಅದರ ಚೆಕ್ಕುಬಂದಿಃ

ಪೂರ್ವಕ್ಕೆ ಃ ಆಂಧ್ರ ಗಡಿಭಾಗ
ಪಶ್ಚಿಮಕ್ಕೆ ಃ ಇತರ ಪಾಲುದಾರರಿಗೆ ಸೇರಿದ ಉಳಿದಿರುವ ಭಾಗ
ಉತ್ತರಕ್ಕೆ ಃ ಗೋವಿಂದಪ್ಪನ ಜಾಗ
ದಕ್ಷಿಣಕ್ಕೆ ಃ ಚನ್ನಪ್ಪ ಅವರ ಉಳಿದಿರುವ ಭೂಮಿ

3. ದಾವಾ ಪತ್ರದ ಸಾರಾಂಶ ಈ ಕೆಳಕಂಡಂತಿರುತ್ತದೆಃ-

ವಾದಿಯರು ದಾವಾ ಆಸ್ತಿಗೆ ಸಂಪೂರ್ಣ ಮತ್ತು ಕಾನೂನು ಬದ್ಧ ಮಾಲೀಕರಾಗಿ ಸ್ವಾಧೀನದಲ್ಲಿರುತ್ತಾರೆಂದು ವಾದಿಯರ 1 ರಿಂದ 3 ಹಾಗೂ ವಾಜೀರ್ ಸಾಬ್ ರವರ ತಂದೆ ದಿವಂಗತ ರಜಾಕ್ ಸಾಬ್ ರವರು ಪ್ರತಿವಾದಿ 6 ರಿಂದ 8 ರವರ ತಂದೆಯಾಗಿರುವ ಚೆನ್ನಪ್ಪ ತಂದೆ ಭೀಮೆಗೌಡ ಇವರಿಂದ ದಾವಾ ಆಸ್ತಿಯನ್ನು ದಿನಾಂಕ 28.06.1985 ರಂದು ಖರೀದಿ ಮಾಡಿದ್ದು ರಜಾಕ್ ಸಾಬ್ ಮತ್ತು ಅವರ ಹೆಂಡತಿ ಖೈರುನಾಬೀ ಇವರು ವಾದಿಯರನ್ನು ಬಿಟ್ಟು ತೀರಿಕೊಂಡಿದ್ದು ಅವರ ದೊಡ್ಡ ಮಗ ವಾಜೀರ್ ಸಾಬ್ ಕೂಡ ವಾದಿ 4 ರಿಂದ 10 ರವರನ್ನು ಅವರ ವಾರಸುದಾರರನ್ನು ಬಿಟ್ಟು ತೀರಿಕೊಂಡಿದ್ದು, ವಾದಿಯರ ತಂದೆ ತಾಯಿ ತೀರಿಕೊಂಡ ನಂತರ ದಾವಾ ಆಸ್ತಿಯಲ್ಲಿ ವಾದಿಯರು ಅವರ ವಾರುಸದಾರರಾಗಿ ಹಕ್ಕನ್ನು ಹೊಂದಿ ಅನುಭವಿಸಿಕೊಂಡು ಬಂದಿದ್ದು ಮತ್ತು ಅವರು ಕಂದಾಯವನ್ನು ಪಾವತಿಸಿದ್ದು ಪ್ರತಿವಾದಿ 1 ರಿಂದ

5 ರವರು ಓ.ಎಸ್ ನಂ. 104/2005 ಎಂದು ಹಿರಿಯೂರು ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಪ್ರತಿವಾದಿಯರ ವಿರುದ್ಧ ದಾವೆಯನ್ನು ಸಲ್ಲಿಸಿದ್ದು, ಆ ದಾವೆಯು ದಿಃ26.09.2008 ರಲ್ಲಿ ಡಿಕ್ರಿಯಾಗಿದ್ದು ಆ ದಾವೆಯ ವಿರುದ್ಧ ಹಿರಿಯ ಸಿವಿಲ್ ನ್ಯಾಯಾಲಯ ಹಿರಿಯೂರಿನಲ್ಲಿ ಆರ್.ಎ ನಂ.7/2008 ಎಂದು ಮೇಲ್ಮನವಿ ಸಲ್ಲಿಸಿದ್ದು ಆ ಮೇಲ್ಮನವಿಯೂ ಕೂಡ ದಿಃ03.06.2014 ರಂದು ವಜಾಗೊಂಡಿದ್ದು ಈಗ ವಾದಿಯರು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಆರ್.ಎಸ್.ಎ ನಂ.749/2015 ಎಂದು ಮೇಲ್ಮನವಿಯನ್ನು ಸಲ್ಲಿಸಿದ್ದು ಆ ಮೇಲ್ಮನವಿಯು ಚಾಲ್ತಿಯಲ್ಲಿರುತ್ತದೆ.

ಪ್ರತಿವಾದಿಯವರ ಪ್ರಕಾರ ಸಿದ್ದವೀರಪ್ಪ ತಂದೆ ನಂಜಪ್ಪ ಇವರು ಸರ್ವೇ ನಂ.161/ಪಿ ಯಲ್ಲಿ 15 ಎಕರೆ ಆಸ್ತಿಯನ್ನು ಚನ್ನಪ್ಪ ರವರಿಂದ ಖರೀದಿ ಮಾಡಿದ್ದು ಸಿದ್ದವೀರಪ್ಪ ತೀರಿಕೊಂಡ 30 ವರ್ಷಗಳಿಂದ ಪ್ರತಿವಾದಿಯವರು ವಾರಸುದಾರರಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. 15 ಎಕರೆ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಅಮರಾಪುರ ಗಡಿಭಾಗ, ಪಶ್ಚಿಮಕ್ಕೆ ಸರ್ವೇ ನಂ.164, ಉತ್ತರಕ್ಕೆ ಸರ್ವೇ ನಂ.159, ದಕ್ಷಿಣಕ್ಕೆ ಸರ್ವೇ ನಂ.162 ಆಗಿದ್ದು ಓ.ಎಸ್ ನಂ.104/2005 ರಲ್ಲಿ ಪೂರ್ವಕ್ಕೆ ಅಮರಾಪುರ ಗಡಿಭಾಗ, ಪಶ್ಚಿಮಕ್ಕೆ ಅದೇ ಆಸ್ತಿಯ ಇತರ ಹಕ್ಕುದಾರರು, ಉತ್ತರಕ್ಕೆ ಗೋವಿಂದಪ್ಪನವರ ಜಮೀನು, ದಕ್ಷಿಣಕ್ಕೆ ಚನ್ನಪ್ಪಯ್ಯನವರ ಇತರೆ ಆಸ್ತಿಯೆಂದು ನಮೂದು ಮಾಡಿರುತ್ತಾರೆ.

ಓ.ಎಸ್.ನಂ.104/2005 ರಲ್ಲಿ ಉಲ್ಲೇಖಿಸಲಾದ 9 ಎಕರೆ 6 ಗುಂಟೆ ಗಡಿಗಳು ಹಾಗೂ ದಿಃ12.01.1967 ರ ಮಾರಾಟ ಪತ್ರದಲ್ಲಿ ಉಲ್ಲೇಖಿಸಿರುವ ಗಡಿಗಳು ಪರಸ್ಪರ ಹೊಂದಾಣಿಕೆ ಆಗುವುದಿಲ್ಲ, ಎರಡು ಭೂಮಿಗಳು ಬೇರೆ ಬೇರೆ ಮತ್ತು ಪ್ರತ್ಯೇಕವಾಗಿರುತ್ತದೆ. ಪ್ರತಿವಾದಿಯವರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮಾಲೀಕತ್ವ ಮತ್ತು ಹಿತಾಸಕ್ತಿ ಇರುವುದಿಲ್ಲ ಹೀಗಿದ್ದರೂ

ಕೂಡ ಪ್ರತಿವಾದಿಯವರು ದಾವಾ ಆಸ್ತಿಯ ವಾದಿಯರ ಸ್ವಾಧೀನಕ್ಕೆ ಮತ್ತು ಅನುಭವಕ್ಕೆ ಅಡಿಪಡಿಸಲು ಅತಿಕ್ರಮಣ ಮಾಡಲು ಮತ್ತು ಆಸ್ತಿಯನ್ನು ಕಬಳಿಸಲು ಪ್ರಯತ್ನಿಸಿರುತ್ತಾರೆ. ಪ್ರತಿವಾದಿಯವರ ಈ ಚಟುವಟಿಕೆಗಳನ್ನು ನ್ಯಾಯಾಲಯದ ಸಹಾಯವಿಲ್ಲದೇ ತಡೆಯಲು ಸಾಧ್ಯವಿಲ್ಲ ಈ ದಾವೆಯ ಕಾರಣ 2 ತಿಂಗಳ ಹಿಂದೆ ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ವಾದಿಯ ಶಾಂತಿಯುತ ಸ್ವಾಧೀನಕ್ಕೆ ತೊಂದರೆ ಪಡಿಸಲು ಪ್ರಯತ್ನಪಟ್ಟಾಗ ಉಂಟಾಗಿರುತ್ತದೆ.

4. ಪ್ರತಿವಾದಿಯವರು ದಾವಾ ಆಸ್ತಿಯ ಸಮನ್ಸ್ ಆದ ನಂತರ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ .

5. 1 ರಿಂದ 5 ನೇ ಪ್ರತಿವಾದಿಯವರ ಪ್ರತಿವಾದ ಪತ್ರದ ಸಾರಾಂಶ ಈ ಕೆಳಗಿನಂತೆ ಇರುತ್ತದೆ.

ವಾದಿಯು ದಾವಾ ಆಸ್ತಿಯಲ್ಲಿ ಮಾಲೀಕರಾಗಿ ಸ್ವಾಧೀನಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ ಎಂಬುದು ಸುಳ್ಳಾಗಿರುತ್ತದೆ. 1 ರಿಂದ 5 ನೇ ಪ್ರತಿವಾದಿಯವರು ಓ.ಎಸ್ ನಂ.104/2005 ಸಿವಿಲ್ ನ್ಯಾಯಾಲಯ ಹಿರಿಯೂರಿನಲ್ಲಿ ವಾದಿಯರ ವಿರುದ್ಧ ದಾವೆ ಸಲ್ಲಿಸಿ ಆ ದಾವೆಯು ದಿಃ26.09.2008 ರಂದು ಡಿಕ್ರಿಯಾಗಿದೆ ಹಾಗೂ ಆ ತೀರ್ಪಿಗೆ ಭಾದಿತರಾಗಿ ವಾದಿಯು ಆರ್.ಎ ನಂ.7/2008 ಎಂದು ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಹಾಗೂ ಆ ಮೇಲ್ಮನವಿಯು ವಜಾಗೊಂಡಿದ್ದು ಆ ಮೇಲ್ಮನವಿಯ ವಿರುದ್ದ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಆರ್.ಎಸ್.ಎ ನಂ.749/2015 ಎಂದು ಮೇಲ್ಮನವಿ ಸಲ್ಲಿಸಿದ್ದಾರೆ ಎಂಬುವುದು ನಿಜವಾಗಿರುತ್ತದೆ ಮತ್ತು ಸಿದ್ದವೀರಪ್ಪ ಇವರು ಸರ್ವೇ ನಂ.161/ಪಿ ಯಲ್ಲಿ 5 ಎಕರೆ ಆಸ್ತಿಯನ್ನು ಚನ್ನಪ್ಪ ಇವರಿಂದ ಖರೀದಿ ಮಾಡಿದ್ದಾರೆ, ತದನಂತರ 1 ರಿಂದ 5 ನೇ

ಪ್ರತಿವಾದಿಯು ಆ ಆಸ್ತಿಯನ್ನು ಅನುಭವಿಸಿಕೊಂಡು ಹೋಗಿರುತ್ತಾರೆ ಎಂಬುದು ಸತ್ಯವಾಗಿರುತ್ತದೆ ಹಾಗೂ ಆ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಅಮರಾವತಿಯ ಗಡಿಭಾಗ, ಪಶ್ಚಿಮಕ್ಕೆ ಸರ್ವೇ ನಂ.164 ರ ಜಮೀನು, ಉತ್ತರಕ್ಕೆ ಸರ್ವೇ ನಂ.159 ರ ಜಮೀನು, ದಕ್ಷಿಣಕ್ಕೆ ಸರ್ವೇ ನಂ.162 ರ ಜಮೀನು. ಆದರೆ ಓ.ಎಸ್ ನಂ.104/2005 ರಲ್ಲಿ ಶೆಡ್ಯೂಲ್ ತಪ್ಪಾಗಿ ತೋರಿಸಿದ್ದಾರೆ ಎನ್ನುವುದು ತಪ್ಪಾಗಿರುತ್ತದೆ.

ವಾದಿಯು ದಾವೆಯಲ್ಲಿ ಕೋರಿದಂತಹ ಯಾವುದೇ ಪರಿಹಾರಕ್ಕೆ ಅರ್ಹರಾಗಿರುವುದಿಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮಾಲೀಕತ್ವ ಮತ್ತು ಹಿತಾಸಕ್ತಿ ಇರುವುದಿಲ್ಲ ಅವರು ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುವುದಿಲ್ಲ . ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ಹಕ್ಕು ಹಿತಾಸಕ್ತಿ ಮಾಲೀಕತ್ವ ಹೊಂದಿರುತ್ತಾರೆ. ಪ್ರತಿವಾದಿಯವರು 1 ನೇ ಪ್ರತಿವಾದಿಯವರ ತಂದೆ ಮತ್ತು 2 ರಿಂದ 5 ನೇ ಪ್ರತಿವಾದಿಯವರು ತಾತಾ ಸಿದ್ದವೀರಪ್ಪ ಇವರಿಂದ ಆಸ್ತಿಯನ್ನು ದಿಃ12.01.1967 ರ ನೊಂದಾಯಿತ ಮಾರಾಟ ಪತ್ರದ ಮೂಲಕ ಚನ್ನಪ್ಪ ಇವರಿಂದ ಖರೀದಿಸಿರುತ್ತಾರೆ ಮಾರಾಟದ ದಿನದಿಂದಲೇ ಸಿದ್ದವೀರಪ್ಪ ಇವರಿಗೆ ದಾವಾ ಆಸ್ತಿಯು ಸ್ವಾಧೀನವನ್ನು ಕೊಟ್ಟಿರುತ್ತಾರೆ.

ದಿಃ28.06.1985 ರಂದು ಚನ್ನಪ್ಪ ಇವರು ಟಿ. ರಜಾಕ್ ಇವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ, ಆದ್ದರಿಂದ ಆ ಮಾರಾಟ ಪತ್ರದ ಮೂಲಕ ರಜಾಕ್ ಸಾಬ್ ರವರಿಗೆ ಯಾವುದೇ ಹಕ್ಕು ಮಾಲೀಕತ್ವ ಹಿತಾಸಕ್ತಿ ದೊರತಿಲ್ಲ ಮತ್ತು ವಾದಿಗೆ ದಾವಾ ಆಸ್ತಿಯಲ್ಲಿ ಸ್ವಾ ಧೀನ ಕೂಡ ನೀಡಿರುವುದಿಲ್ಲ. ದಿಃ 28.06.1985 ರ ಮಾರಾಟ ಪತ್ರವು ಕೃತಕವಾಗಿ ಸೃಷ್ಟಿಸಲ್ಪಟ್ಟ ಮತ್ತು ರಚಿಸಲ್ಪಟ್ಟ ದಾಖಲೆಯಾಗಿರುತ್ತದೆ ಅದು ಪ್ರತಿವಾದಿ 1 ರಿಂದ 5 ರವರ ಹಕ್ಕುಗಳಿಗೆ ಬಾಧ್ಯಕವಾಗಿರುವುದಿಲ್ಲ. ಚೆನ್ನಪ್ಪ ರವರಿಗೆ ದಾವಾ ಆಸ್ತಿಯನ್ನು ರಜಾಕ್ ಸಾಬ್ ರವರಿಗೆ ಮಾರಾಟ

ಮಾಡುವ ಅಧಿಕಾರ ಇರುವುದಿಲ್ಲ. ಈ ದಾವೆಯು ಅಗತ್ಯ ಪಕ್ಷಗಾರರನ್ನು ಹೊಂದದೆ ದೋಷಪೂರಕವಾಗಿದ್ದು ಕಾಲಪರಿಮಿತಿ ಕಾಯ್ದೆಯಡಿಯಿಂದಲೂ ನಿರ್ಭಂದಿತವಾಗಿದೆ ಮಾರಾಟ ಪತ್ರದಲ್ಲಿನ ಗಡಿಗಳು ಮತ್ತು ಓ.ಎಸ್ ನಂ.104/2005 ರಲ್ಲಿನ ಗಡಿಗಳು ಒಂದೇ ಆಗಿವೆ ಆದ್ದರಿಂದ ದಾವೆಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

6. 6 ರಿಂದ 8 ನೇ ಪ್ರತಿವಾದಿಯವರ ಪ್ರತಿವಾದ ಪತ್ರದ ಸಾರಾಂಶ ಈ ಕೆಳಗಿನಂತೆ ಇರುತ್ತದೆ.

ಈ ಪ್ರತಿವಾದಿಯ ತಂದೆ ಚನ್ನಪ್ಪ ಇವರು ದಾವಾ ಆಸ್ತಿಯನ್ನು ದಿನಾಂಕ 28.06.1985 ರಂದು ಟಿ. ರಜಾಕ್ ಸಾಬ್ ಬಿನ್ ಬುಡೇನ್ ಸಾಬ್ ಇವರಿಗೆ ಮಾರಾಟ ಮಾಡಿರುತ್ತಾರೆ ಎಂಬುದು ಸುಳ್ಳಾಗಿರುತ್ತದೆ ಮತ್ತು ಟಿ. ರಜಾಕ್ ಸಾಬ್ ಮತ್ತು ಖೈರುನಾಬಿ ಮತ್ತು ಅವರ ಮಗ ವಜೀರ್ ಸಾಬ್ ಮತ್ತು ವಾದಿಯರು ದಾವಾ ಆಸ್ತಿಯಲ್ಲಿ ಜಂಟಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಹೋಗುತ್ತಿರುತ್ತಾರೆ ಎಂಬುದು ಸುಳ್ಳಾಗಿರುತ್ತದೆ. 1 ರಿಂದ 5 ನೇ ಪ್ರತಿವಾದಿಯವರು ಓ.ಎಸ್ ನಂ.104/2005 ಸಿವಿಲ್ ನ್ಯಾಯಾಲಯ ಹಿರಿಯೂರಿನಲ್ಲಿ ವಾದಿಯರ ವಿರುದ್ಧ ದಾವೆ ಸಲ್ಲಿಸಿ ಆ ದಾವೆಯು 26.09.2008 ರಂದು ಡಿಕ್ರಿಯಾಗಿದೆ ಎಂದು ಹಾಗೂ ಆ ತೀರ್ಪಿಗೆ ಭಾದಿತರಾಗಿ ವಾದಿಯು ಆರ್.ಎ ನಂ.7/2008 ಎಂದು ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಹಾಗೂ ಆ ಮೇಲ್ಮನವಿಯು ವಜಾಗೊಂಡಿದ್ದು ಆ ಮೇಲ್ಮನವಿಯ ವಿರುದ್ದ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಆರ್.ಎಸ್.ಎ ನಂ.749/2015 ಎಂದು ಮೇಲ್ಮನವಿ ಸಲ್ಲಿಸಿದ್ದಾರೆ ಎಂಬುದು ನಿಜವಾಗಿರುತ್ತದೆ ಮತ್ತು ಸಿದ್ದವೀರಪ್ಪ ಇವರು ಸರ್ವೇ ನಂ.161/ಪಿ ರಲ್ಲಿ 5 ಎಕರೆ ಆಸ್ತಿಯನ್ನು ಚನ್ನಪ್ಪ ಇವರಿಂದ ಖರೀದಿ ಮಾಡಿದ್ದಾರೆ ತದನಂತರ 1 ರಿಂದ 5 ನೇ ಪ್ರತಿವಾದಿಯು ಆ ಆಸ್ತಿಯನ್ನು ಅನುಭವಿಸಿಕೊಂಡು ಹೋಗಿರುತ್ತಾರೆ ಎಂಬುದು ಸತ್ಯವಾಗಿರುತ್ತದೆ.

ಸಿದ್ದವೀರಪ್ಪ ಇವರ ಕ್ರಯಪತ್ರದಲ್ಲಿ ಚಕ್ಕುಬಂದಿ ನಮೂದಾಗಿರುತ್ತದೆ ಮತ್ತು ಓ.ಎಸ್ ನಂ.104/2005 ರ ದಾವಾ ಅನುಸೂಚಿಯ ಚಕ್ಕುಬಂದಿ ಮತ್ತು ಕ್ರಯಪತ್ರ 12.01.1967 ರ ಕ್ರಯಪತ್ರದ ಚಕ್ಕುಬಂದಿಗಳು ಬೇರೆ ಬೇರೆ ಆಗಿರುತ್ತದೆ ಮತ್ತು ಒಂದಕ್ಕೊಂದು ತಾಳೆ ಆಗುತ್ತಿಲ್ಲ ಎಂಬುದು ಸುಳ್ಳಾಗಿರುತ್ತದೆ ಮತ್ತು ಪ್ರತಿವಾದಿಯವರು ದಾವಾ ಆಸ್ತಿಯನ್ನು ಕಬಳಿಸುವ ಸಲುವಾಗಿ ಮತ್ತು ದುರ್ಲಾಭ ಪಡೆಯುವ ಸಲುವಾಗಿ ದಾವಾ ಆಸ್ತಿಯನ್ನು ಅತಿಕ್ರಮಣ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದು ಸುಳ್ಳಾಗಿರುತ್ತದೆ. ಈ ದಾವೆಯು ಕಾಲಪರಿಮಿತಿಯನ್ನು ದಾಟಿರುತ್ತದೆ ಮತ್ತು ಈ ದಾವೆಯನ್ನು ಸಲ್ಲಿಸಲು ಸಕಾರಣ ಇರುವುದಿಲ್ಲ ಮತ್ತು ವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು, ಅಧಿಕಾರ, ಮಾಲೀಕತ್ವ, ಸ್ವಾಧೀನ ಇರುವುದಿಲ್ಲ. ಆದ್ದರಿಂದ ದಾವೆಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

7. ವಾದಪತ್ರ ಮತ್ತು ಪ್ರತಿವಾದ ಪತ್ರದ ಆಧಾರದ ಮೇರೆಗೆ ನ್ಯಾಯಾಲಯವು ಈ ಕೆಳಕಂಡ ಅಂಶಗಳನ್ನು ರಚಿಸಿರುತ್ತದೆಃ–

1. Whether the plaintiff No.1 and 2 prove that they are the absolute owners in possession and enjoyment of suit schedule property by virtue of sale deed dated 28.06.1985 by Rajak sab ?

2. Whether the plaintiffs prove the alleged interference by the defendants?

3. Whether the defendants No.1 to 5 proves that suit schedule property is purchased to the Sri.Siddaveerappa S/o Nanjappa, grand father of

defendant No.2 to 5, father of defendant No.1 under the registered sale deed 12.01.1967?

4. Whether the suit is bad for non–joinder of necessary parties?

5. Whether the defendants proves that suit is bared by limitation?

6. Whether the plaintiffs are entitled for the relief claimed?

7. What decree or order?

8. ವಾದಿಯು ತಮ್ಮ ವಾದಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತು ಪಡಿಸಲು 1 ನೇ ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ–1 ಎಂದು ವಿಚಾರಣೆ ಮಾಡಿಕೊಂಡು, ಒಟ್ಟು 17 ದಾಖಲಾತಿಗಳನ್ನು ನಿ.ಪಿ–1 ರಿಂದ 17 ಎಂದು ಗುರುತಿಸಿಕೊಂಡಿರುತ್ತಾರೆ ಹಾಗೂ ತನ್ನ ಪರವಾಗಿ ಎನ್.ಡಿ.ರಿಜ್ವಾನ್ ಸಾಬ್ ಇವರನ್ನು ಪಿ.ಡಬ್ಲ್ಯೂ–2 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ 2 ನೇ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲ್ಯೂ–1 ಎಂದು ವಿಚಾರಣೆ ಮಾಡಿಕೊಂಡಿದ್ದು ಮತ್ತು ಸಾಕ್ಷಿದಾರರಾಗಿ ಕೆ.ಎಸ್.ಈಶ್ವರಪ್ಪ ಇವರನ್ನು ಡಿ.ಡಬ್ಲ್ಯೂ–2 ಎಂದು ವಿಚಾರಣೆ ಮಾಡಿಕೊಂಡಿದ್ದು ಒಟ್ಟು 10 ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ–1 ರಿಂದ 10 ಎಂದು ಗುರುತಿಸಲಾಯಿತು.

9. ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದವನ್ನು ಕೇಳಿ, ಮೌಖಿಕ ಸಾಕ್ಷ್ಯ ಮತ್ತು ದಾಸ್ತಾವೇಜುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ನ್ಯಾಯಾಲಯವು ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದೆ.

ವಿವಾದಾಂಶ–1 ಃ ನಕಾರಾತ್ಮಕವಾಗಿ,

| | | |
|---|---|---|
| ವಿವಾದಾಂಶ–2 | ಃ | ನಕಾರಾತ್ಮಕವಾಗಿ, |
| ವಿವಾದಾಂಶ–3 | ಃ | ಸಕಾರಾತ್ಮಕವಾಗಿ |
| ವಿವಾದಾಂಶ–4 | ಃ | ನಕಾರಾತ್ಮಕವಾಗಿ, |
| ವಿವಾದಾಂಶ–5 | ಃ | ಸಕಾರಾತ್ಮಕವಾಗಿ, |
| ವಿವಾದಾಂಶ–6 | ಃ | ನಕಾರಾತ್ಮಕವಾಗಿ, |
| ವಿವಾದಾಂಶ–7 | ಃ | ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ |

## ಕಾ ರ ಣ ಗ ಳು

10. **ವಿವಾದಾಂಶ–1 ಮತ್ತು 3 ಃ–** ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯದ ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಂಡಿದೆ.

ವಾದಿಯರು ತಮ್ಮ ವಾದಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸಲು 1 ನೇ ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆ ಮಾಡಿಕೊಂಡು, ಒಟ್ಟು 17 ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ ನಿ.ಪಿ1 ಮತ್ತು 2 ಪಹಣಿ ಪತ್ರಿಕೆಗಳು , ನಿ.ಪಿ.3 ಕ್ರಯಪತ್ರದ ದೃಢೀಕೃತ ಪ್ರತಿ , ನಿ.ಪಿ.4 ಪಹಣಿ ಪತ್ರಿಕೆಯ ದೃಢೀಕೃತ ಪ್ರತಿ, ನಿ.ಪಿ.5 ಮತ್ತು 6 ಮ್ಯುಟೇಶನ್ ರಿಜಿಸ್ಟರ್ ನ ದೃಢೀಕೃತ ಪ್ರತಿ, ನಿ.ಪಿ.7 ಋಣಭಾರ ರಹಿತ ಪ್ರಮಾಣ ಪತ್ರ , ನಿ.ಪಿ.8 ಕರ್ನಾಟಕ ರಿವಿಜನ್ ಸೆಟಲ್ ಮೆಂಟ್ ಆಕಾರ್ ಬಂದ್ (ಉತಾರು) ಪ್ರತಿ, ನಿ.ಪಿ.9 ಮರಣ ಪ್ರಮಾಣ ಪತ್ರ, ನಿ.ಪಿ.10 ರಿಂದ 14 ಪಾವತಿಯ ರಸೀತಿಗಳು, ನಿ.ಪಿ.15 ದಿಃ 12.01.1967 ರ ಕ್ರಯ ಪತ್ರ, ನಿ.ಪಿ.16 ದಿಃ 30.04.1973 ರ ವಿಭಾಗ ಪತ್ರ , ನಿ.ಪಿ.17 ಹಿಸ್ಸಾ ಟಿಪ್ಪಣಿ ಆಗಿರುತ್ತದೆ.

11. ವಾದಿಯ ಪ್ರಕಾರ ಅವರ ತಂದೆ 28.06.1985 ರಂದು ಚನ್ನಪ್ಪ ತಂದೆ ಭೀಮಗೌಡ ಅಂದರೆ ಪ್ರತಿವಾದಿ 6 ರಿಂದ 8 ರವರ ತಂದೆಯವರಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದು, ರಜಾಕ್ ಸಾಬ್ ಮತ್ತು ಅವರ ಹೆಂಡತಿ ಖೈರುನಾಬೀ ಇವರು ವಾದಿಯರನ್ನು ಬಿಟ್ಟು ತೀರಿಕೊಂಡಿದ್ದು ಅವರ ದೊಡ್ಡ ಮಗ ವಜೀರ್ ಸಾಬ್ ಕೂಡ ವಾದಿ 4 ರಿಂದ 10 ರವರನ್ನು ಅವರ ವಾರಸುದಾರರನ್ನು ಬಿಟ್ಟು ತೀರಿಕೊಂಡಿದ್ದು ವಾದಿಯರ ತಂದೆ ತಾಯಿ ತೀರಿಕೊಂಡ ನಂತರ ದಾವಾ ಆಸ್ತಿಯಲ್ಲಿ ಅವರು ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿದ್ದು ಮತ್ತು ಅವರು ಕಂದಾಯವನ್ನು ಪಾವತಿಸಿದ್ದು ಪ್ರತಿವಾದಿ 1 ರಿಂದ 5 ಪ್ರತಿವಾದಿಯವರು ಓ.ಎಸ್ ನಂ. 104/2005 ಎಂದು ಹಿರಿಯೂರು ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ವಾದಿಯರ ವಿರುದ್ಧ ದಾವೆಯನ್ನು ಸಲ್ಲಿಸಿದ್ದು ಆ ದಾವೆಯು ದಿಃ26.09.2008 ರಲ್ಲಿ ಡಿಕ್ರಿಯಾಗಿದ್ದು ಆ ದಾವೆಯ ವಿರುದ್ಧ ಹಿರಿಯ ಸಿವಿಲ್ ನ್ಯಾಯಾಲಯ ಹಿರಿಯೂರಿನಲ್ಲಿ ವಾದಿಯರು ಆರ್.ಎ ನಂ.7 /2008 ಎಂದು ಮೇಲ್ಮನವಿ ಸಲ್ಲಿಸಿದ್ದು ಆ ಮೇಲ್ಮನವಿಯೂ ಕೂಡ ದಿಃ 03.06.2014 ರಂದು ವಜಾಗೊಂಡಿದ್ದು ಈಗ ವಾದಿಯರು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಆರ್.ಎಸ್.ಎ ನಂ.749/2015 ಎಂದು ಮೇಲ್ಮನವಿಯನ್ನು ಸಲ್ಲಿಸಿದ್ದು ಆ ಮೇಲ್ಮನವಿಯು ಚಾಲ್ತಿಯಲ್ಲಿರುತ್ತದೆ ಎಂಬುದಾಗಿರುತ್ತದೆ.

12. ಡಿ ಡಬ್ಲ್ಯೂ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿಗಳು ದಾವಾ ಆಸ್ತಿಯಲ್ಲಿ ಎಂದೂ ಸಹ ಸ್ವಾಧೀನಾನುಭವದಲ್ಲಿರುವುದಿಲ್ಲ ಮತ್ತು ದಾವಾ ಸ್ವತ್ತಿನ ಮಾಲೀಕರಾಗಿರುವುದಿಲ್ಲ, ಪ್ರತಿವಾದಿ 1 ರಿಂದ 5 ರವರು ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರಾಗಿದ್ದು ಸ್ವಾಧೀನಾನುಭವ ಹೊಂದಿರುತ್ತಾರೆ. ದಾವಾ ಸ್ವತ್ತನ್ನು 1 ನೇ ಪ್ರತಿವಾದಿ ತಂದೆ ಮತ್ತು 2 ರಿಂದ 5 ನೇ ಪ್ರತಿವಾದಿಯ ತಾತ ಸಿದ್ದವೀರಪ್ಪ ದಿನಾಂಕ 12.01.1967 ರಲ್ಲಿ ಚನ್ನಪ್ಪ ಇವರಿಂದ ಕ್ರಯಕ್ಕೆ ಕೊಂಡಿದ್ದು ಅಂದಿನಿಂದ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ

ಎಂದು ಸದರಿ ಚನ್ನಪ್ಪ ಬಿನ್ ಭೀಮೇಗೌಡ ಇವರು ದಾವಾ ಸ್ವತ್ತನ್ನು ರಜಾಕ್ ಸಾಬ್ ಇವರಿಗೆ ದಿನಾಂಕ 28.06.1985 ರಂದು ಮಾರಾಟ ಮಾಡಿರುತ್ತಾರೆ ಎಂಬುದು ಸುಳ್ಳಾಗಿರುತ್ತದೆ ಎಂದು ನುಡಿದಿರುತ್ತಾರೆ.

13. ಡಿ. ಡಬ್ಲ್ಯೂ-1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ದಾವಾ ಸ್ವತ್ತು ಹಕ್ಕು ಮತ್ತು ಸ್ವಾಧೀನ ದಿನಾಂಕ 28.06.1985 ರ ಕ್ರಯ ಪತ್ರದಂತೆ ರಜಾಕ್ ಸಾಬ್ ರವರಿಗೆ ಪ್ರಾಪ್ತವಾಗಿರುವುದಿಲ್ಲ ಮತ್ತು ಸ್ವಾಧೀನ ಬಿಟ್ಟು ಕೊಟ್ಟಿರುವುದಿಲ್ಲ ಮತ್ತು ಸದರಿ ಕ್ರಯಪತ್ರವು ಪ್ರತಿವಾದಿ 6 ರಿಂದ 8 ನೇ ರವರ ಗಮನಕ್ಕೆ ಬಾರದಂತೆ ಸೃಷ್ಟಿ ಮಾಡಿಕೊಂಡಿರುವುದ್ದಾಗಿರುತ್ತದೆ. ಆ ಕ್ರಯಪತ್ರದ ಚಕ್ಕುಬಂದಿ ಮತ್ತು ಅಸಲು ದಾವಾ ಸಂಖ್ಯೆ: 104/2005 ರ ಅನುಸೂಚಿಯಲ್ಲಿ ನಮೂದಿಸಿರುವ ಚಕ್ಕುಬಂದಿಯು ಒಂದೇ ಆಗಿರುತ್ತದೆ ಎಂದು, ಆ ದಾವೆಯೂ ದಿನಾಂಕ 26.09.2008 ರಂದು ಪ್ರತಿವಾದಿ ಪರ ತೀರ್ಪು ಆಗಿದ್ದು ವಾದಿಯರು ಸದರಿ ತೀರ್ಪಿನ ವಿರುದ್ಧ ಆರ್.ಎ.ನಂಃ 7/2008 ನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯು ಸಹ ವಜಾ ಆಗಿರುತ್ತದೆ ಎಂದು, ವಾದಿಗಳು ಸದರಿ ಆದೇಶದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆರ್.ಎಸ್.ಎ. ನಂಃ 749/2015 ಅನ್ನು ಸಲ್ಲಿಸಿದ್ದು, ಅದು ವಜಾ ಆಗಿರುತ್ತದೆ ಎಂದು ನುಡಿದಿರುತ್ತಾರೆ.

14. ಪಿ ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ 1 ರಿಂದ 5 ನೇ ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂಧಿಸಿದಂತೆ 6 ರಿಂದ 8 ನೇ ಪ್ರತಿವಾದಿಗಳು ಹಾಗೂ ವಜೀರ್ ಸಾಬ್, ಬುಡೇನ್ ಸಾಬ್, ಫಕ್ರುದ್ದೀನ್ ಸಾಬ್, ಅಬ್ದುಲ್ ಖಾದರ್, ಮುಮ್ತಾಜ್ ಹಾಗೂ ಇತರರ ವಿರುದ್ಧ ಓ.ಎಸ್.104/2005 ಎನ್ನುವ ದಾವೆ ಹೂಡಿದ್ದರು ಎಂದರೆ ಸರಿ ಎಂದು, ಸದರಿ ದಾವೆ ಡಿಕ್ರಿಯಾಗಿದ್ದು ನಿಂಗಮ್ಮ, ಶಿವಕುಮಾರ್, ನಾಗರಾಜ್, ರವಿಕುಮಾರ್ ಹಾಗೂ ವಿರುಪಾಕ್ಷ ರವರು ದಾವಾ ಆಸ್ತಿಯ ಮಾಲೀಕರು ಎಂದು ಅದರಲ್ಲಿ ಆದೇಶವಾಗಿದೆ ಎಂದರೆ ಸರಿ ಎಂದು, ಅವರು

ಸಲ್ಲಿಸಿದ ಮೇಲ್ಮನವಿ ವಜಾಗೊಂಡಿದೆ ಎಂದರೆ ಸರಿಯೆಂದು ಆ ಮೇಲ್ಮನವಿ ತೀರ್ಪನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆರ್.ಎಸ್.ಎ.ನಂಃ749/2015 ಎನ್ನುವ 2 ನೇ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ ಎಂದು  ಆ ಮೇಲ್ಮನವಿ ಇನ್ನೂ ಚಾಲ್ತಿಯಲ್ಲಿದೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

15. ಪಿಡಬ್ಲ್ಯೂ 1 ರವರು ಮುಂದುವರೆದು ತಮ್ಮ ಪಾಟೀ ಸವಾಲಿನಲ್ಲಿ ಓ.ಎಸ್.104/2005 ರ ದಾವೆಯಲ್ಲಿ ಸರ್ವೆ ನಂಃ 161/1 ಬಿ ರಲ್ಲಿನ 5 ಎಕರೆ 6 ಗುಂಟೆಗೆ ಸಂಬಂಧಿಸಿದಂತೆ ಹೂಡಲಾಗಿತ್ತು ಎಂದರೆ ಸರಿ ಎಂದು, ಆ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಅಮರಾಪುರದ ಗಡಿ ಎಂದು, ಪಶ್ಚಿಮಕ್ಕೆ ಇದೇ ಪೈಕಿ ಉಳಿದ ಭಾಗಸ್ಥರ ಜಮೀನು ಎಂದು, ಉತ್ತರಕ್ಕೆ ಗೋವಿಂದಪ್ಪನವರ ಜಮೀನು ಎಂದು ಹಾಗೂ ದಕ್ಷಿಣಕ್ಕೆ ಕೆ.ಚನ್ನಪ್ಪನವರ ಭಾಗದ ಜಮೀನು ಎಂದು ನಮೂದಿಸಲಾಗಿತ್ತು ಎಂದರೆ ಸರಿ ಎಂದು ನುಡಿದಿರುತ್ತಾರೆ.

16. ಪಿಡಬ್ಲ್ಯೂ 2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿಯ ತಂದೆ ದಾವಾ ಆಸ್ತಿಯನ್ನು ದಿನಾಂಕ 28.06.1985 ರಂದು ಚನ್ನಪ್ಪರವರಿಂದ ಕ್ರಯಕ್ಕೆ ಕೊಂಡಿರುತ್ತಾರೆಂದು ಆ ಸಮಯದಲ್ಲಿ ಅವರು ಹಣದ ಸಹಾಯ ಮಾಡಿರುತ್ತಾರೆ ಮತ್ತು ಕ್ರಯದ ಸಮಯದಲ್ಲಿ ಅವರು ಸಹ ತಾಲ್ಲೂಕು ಕಛೇರಿಯಲ್ಲಿ ಇದ್ದರು ಮತ್ತು ಕ್ರಯಕ್ಕೆ ಕೊಂಡಾಗಿನಿಂದ ವಾದಿಯ ತಂದೆಯವರು ಮಾಲೀಕನಾಗಿ ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿಕೊಂಡು ಬಂದಿರುತ್ತಾರೆ, ಈಗ ಪ್ರತಿವಾದಿಯರು ವಾದಿಯರ ದಾವಾ ಆಸ್ತಿಯಲ್ಲಿ ಉಳುಮೆ ಮಾಡಲು ಹೋದಾಗ ಅಡ್ಡಿಪಡಿಸಿರುತ್ತಾರೆಂದು  ನುಡಿದಿರುತ್ತಾರೆ.

17. ಪಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ದಾವಾ ಆಸ್ತಿಯನ್ನು 1 ನೇ ವಾದಿಯರ ತಂದೆ ಅಬ್ದುಲ್ ರಜಾಕ್ ಹಾಗೂ ವಜೀರ್ ಸಾಬ್ ಜಂಟಿಯಾಗಿ ಖರೀದಿಸಿದ್ದರು ಎಂದು, ಆ ಬಗ್ಗೆ ಇರುವ ಕ್ರಯಪತ್ರವನ್ನು ಅವರು ನೋಡಿದ್ದಾರೆಂದು ಆ ಕ್ರಯಪತ್ರಕ್ಕೆ ಅವರು ಸಾಕ್ಷಿದಾರನಾಗಿ ಸಹಿ ಮಾಡಿಲ್ಲವೆಂದು, ಆ ಕ್ರಯಪತ್ರಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎನ್ನುವುದು ಅವರಿಗೆ ಗೊತ್ತಿಲ್ಲವೆಂದು, ದಾವಾಸ್ತಿಗೆ ಸಂಬಂಧಿಸಿದಂತೆ ಬೇರೆ ಯಾವುದಾದರೂ ದಾವೆ ಅಥವಾ ಪ್ರಕರಣ ಇದೆಯೇ ಎನ್ನುವುದನ್ನು ಅವರು ತಿಳಿದುಕೊಂಡಿಲ್ಲವೆಂದು, ವಾದಿಯರ ತಂದೆಯವರು ದಾವಾ ಆಸ್ತಿಯನ್ನು ಖರೀದಿಸಿದ್ದಾರೆ ಎಂದು ಹೇಳಿದ ಸ್ವತ್ತಿನ ಚೆಕ್ಕುಬಂದಿ ಅವರಿಗೆ ಹೇಳಲು ಆಗುವುದಿಲ್ಲವೆಂದು ದಾವಾ ಆಸ್ತಿಯ ಖಾತೆ ರಜಾಕ್ ಸಾಬ್‌ನ ಹೆಂಡತಿ ಮಕ್ಕಳ ಹೆಸರಿನಲ್ಲಿದೆ ಎಂದು ಆ ದಾಖಲಾತಿಗಳನ್ನು ಅವರು 10–12 ವರ್ಷಗಳ ಹಿಂದೆ ನೋಡಿದ್ದಾರೆಂದು ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ವಾದಿಗಳು ಇದ್ದಾರೆ ಎನ್ನುವ ವಿಚಾರವನ್ನು ಅವರಿಗೆ 1 ನೇ ವಾದಿ ಹೇಳಿದ್ದಾರೆಂದು, ಅದರಂತೆ ಪ್ರತಿವಾದಿಗಳು ಅವರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು 1 ನೇ ವಾದಿಯೇ ಅವರಿಗೆ ಹೇಳಿರುತ್ತಾರೆಂದು ನುಡಿದಿರುತ್ತಾರೆ.

18. ಡಿ.ಡಬ್ಲ್ಯೂ 2 ರವರು ಸಾಕ್ಷಿದಾರರಾಗಿದ್ದು ಅವರಿಗೆ ವಾದಿಯರು ಮತ್ತು ಪ್ರತಿವಾದಿಯರು ಗೊತ್ತು ದಾವಾ ಸ್ವತ್ತು ರಿ.ಸ.ನಂ.161 ರಲ್ಲಿ ಒಟ್ಟು 9 ಎಕರೆ 8 ಗುಂಟೆ ಜಮೀನು ಇದ್ದು ದಾವಾ ಸ್ವತ್ತಿನಲ್ಲಿ ಪ್ರತಿವಾದಿ ನಿಂಗಮ್ಮ ಮತ್ತು ಆಕೆಯ ಮಕ್ಕಳು ಸ್ವಾಧೀನ ಅನುಭವ ಹೊಂದಿರುತ್ತಾರೆ . ದಾವಾ ಸೊತ್ತನ್ನು ಪ್ರತಿವಾದಿಯರು ಸುಮಾರು ವರ್ಷಗಳ ಹಿಂದೆ ಶುದ್ಧ ಕ್ರಯಕ್ಕೆ ಕೊಂಡು ಕೊಂಡಿರುತ್ತಾರೆ . ಪ್ರತಿವಾದಿ 1 ರಿಂದ 5 ರವರ ತಂದೆ ಮತ್ತು ಪ್ರತಿವಾದಿ 2 ರಿಂದ 5 ರವರ ತಾತ ಖರೀದಿ ಮಾಡಿದಾಗಲಾಯ್ತು ಪ್ರತಿವಾದಿ 1 ರಿಂದ 5 ರವರುಗಳೇ ಮಾಲೀಕರಾಗಿ ಹಕ್ಕು ,ಹಿತಾಸಕ್ತಿ, ಸ್ವಾಧೀನ ಹೊಂದಿ, ದಾವಾ ಸೊತ್ತನ್ನು ಅನುಭವಿಸುತ್ತಿರುತ್ತಾರೆ, ದಾವಾ ಸೊತ್ತಿನಲ್ಲಿ

ವಾದಿಯರು ಎಂದು ಸ್ವಾ ಧೀನಾನುಭವ ಹೊಂದಿರುವುದಿಲ್ಲ, ಪ್ರತಿವಾದಿ 1 ರಿಂದ 5 ರವರನ್ನು ಹೊರತುಪಡಿಸಿ ದಾವಾ ಸೊತ್ತಿನಲ್ಲಿ ಬೇರೆ ಯಾರೂ ಸ್ವಾ ಧೀನಾನುಭವ ಹೊಂದಿರುವುದಿಲ್ಲವೆಂದು ನುಡಿದಿರುತ್ತಾರೆ.

19. ವಾದಿಯ ಪರ ವಕೀಲರು ವಾದಿಯರು ದಾವಾ ಆಸ್ತಿಗೆ ಮಾಲೀಕರಾಗಿ ಸ್ವಾಧೀನ ಹೊಂದಿದ್ದಾರೆಂದು ಹಾಗೂ ಚನ್ನಪ್ಪ ಇವರಿಗೆ ಬಂದ ಹಿಸ್ಸೆಯಲ್ಲಿ 9 ಎಕರೆ 6 ಗುಂಟೆಯನ್ನು ಅವರು ರಜಾಕ್ ಸಾಬ್ ರವರಿಗೆ ಮಾರಾಟ ಮಾಡಿದ್ದು ಆದ್ದರಿಂದ ಅವರು ದಾವಾ ಆಸ್ತಿಯ ಮಾಲೀಕರು ಎಂದು ವಾದಿಸಿರುತ್ತಾರೆ. ವಾದಿಯವರು ದಾವಾ ಆಸ್ತಿಯಲ್ಲಿ ನಮೂದಿಸಿದ ಚಕ್ಕುಬಂಧಿ ಪೂರ್ವಕ್ಕೆ ಆಂಧ್ರ ಬಾರ್ಡರ್, ಪಶ್ಚಿಮಕ್ಕೆ ಇದೇ ಆಸ್ತಿಯ ಉಳಿದ ಹಿಸ್ಸೆ, ಉತ್ತರಕ್ಕೆ ಗೋವಿಂದಪ್ಪ ರವರ ಜಮೀನು, ದಕ್ಷಿಣಕ್ಕೆ ಚನ್ನಪ್ಪನ ಇತರೆ ಹಿಸ್ಸೆ ಎಂದು ನಮೂದು ಮಾಡಿರುವುದು ಕಂಡುಬರುತ್ತದೆ.

20. ನಿಪಿ.1 ಸರ್ವೇ ನಂ.161/1 ಡಿಪಿ ಯ ಪಹಣಿ ಪತ್ರಿಕೆಯಾಗಿದ್ದು ಆ ದಾಖಲಾತಿಯಲ್ಲಿ ಕಾಲಂ ನಂ.9 ರಲ್ಲಿ ವಜೀರ್ ಸಾಬ್ ಬಿನ್ ರಜಾಕ್ ಸಾಬ್ 4 ಎಕರೆ ಎಂದು ನಮೂದಾಗಿರುವುದು ಕಂಡು ಬರುತ್ತದೆ . ನಿಪಿ.2 ಸರ್ವೇ ನಂ.161/1 ಬಿ ಯ ಪಹಣಿ ಪತ್ರಿಕೆಯಾಗಿದ್ದು ಆ ದಾಖಲಾತಿಯಲ್ಲಿ ಕಾಲಂ ನಂ.9 ರಲ್ಲಿ ಖೈರುನ್ ಬೀನ್ನಿಸಾ ಬಿ ಕೋಂ ಲೇಟ್ ರಜಾಕ್ ಸಾಬ್, ಫಕೃದ್ದೀನ್, ಅಬ್ದುಲ್ ಖಾದರ್, ಬೈರುನಯಿ ಇವರ ಹೆಸರು ಜಂಟಿಯಾಗಿ 5.08 ಎಕರೆ ಜಮೀನು ಎಂದು ನಮೂದಾಗಿರುವುದು ಕಂಡುಬರುತ್ತದೆ. ನಿಪಿ.4 ರ ಪ್ರಕಾರ ಸರ್ವೇ ನಂ.161/1 ಬಿ ಯ ಪಹಣಿ ಪತ್ರಿಕೆಯಾಗಿದ್ದು ಆ ದಾಖಲಾತಿಯಲ್ಲಿ ರಜಾಕ್ ಸಾಬ್ ಇವರ ಹೆಸರು ಕಡತಮಾಡಿ ಖೈರುನ್ ಬೀ ಫಕೃದ್ದೀನ್ ಬೈರುನ್ನಾಬೀ ವಜೀರ್ ಎಂದು ಕಾಲಂ ನಂ.9 ರಲ್ಲಿ ನಮೂದಾಗಿರುತ್ತದೆ. ನಿಪಿ.9 ರ ಪ್ರಕಾರ ಸಿದ್ದವೀರಪ್ಪ ಇವರ ಮರಣ ಪ್ರಮಾಣ

ಪತ್ರವಾಗಿದ್ದು ಆ ದಾಖಲಾತಿಯಲ್ಲಿ ಅವರು ದಿಃ08.06.1980 ರಂದು ತೀರಿಕೊಂಡಿರುತ್ತಾರೆಂದು ನಮೂದಾಗಿರುತ್ತದೆ.

21. ವಾದಿಯವರ ಪ್ರಕಾರ ಅಸಲು ದಾವಾ ನಂ.104/2005 ರಲ್ಲಿ ಕಾಣಿಸಿದ ಆಸ್ತಿಯ ಚಕ್ಕುಬಂಧಿ ಮತ್ತು 12.01.1967 ರ ಕ್ರಯ ಪತ್ರದಲ್ಲಿ ಕಾಣಿಸಿದ ಚಕ್ಕುಬಂಧಿ ಬೇರೆ ಬೇರೆಯಾಗಿರುತ್ತದೆ ಎಂಬುದಾಗಿರುತ್ತದೆ. ಓ.ಎಸ್ ನಂ.104/2005 ತೀರ್ಪಿನ ಪ್ರತಿಯನ್ನು ಪ್ರತಿವಾದಿಯವರು ಹಾಜರುಪಡಿಸಿದ್ದು ಆ ದಾಖಲಾತಿಯಲ್ಲಿ ಈ ದಾವೆಯ 1 ರಿಂದ 5 ನೇ ಪ್ರತಿವಾದಿಯವರು ವಾದಿಯವರಾಗಿರುತ್ತಾರೆ. ಆ ದಾವೆಯಲ್ಲಿ ದಾವಾ ಅನುಸೂಚಿ ಯನ್ನು ಈ ಕೆಳಗಿನಂತೆ ಉಲ್ಲೇಖಿಸಿರುತ್ತಾರೆ . ಸರ್ವೆ ನಂ.161/ಡಿಪಿ ಅಳತೆ 4 ಎಕರೆ ಪೈಕಿ (1) ಹೊಸ ರಿ ಸರ್ವೆ ನಂ.161/ಡಿಪಿ ಅಳತೆ 4 ಎಕರೆ , ಆಕಾರ ರೂ.1.01 ಪೈಸೆ ಉಳ್ಳ ಜಮೀನು ಒಂದು ಮತ್ತು (2) ರಿ ಸರ್ವೆ ನಂ.161/1 ಬಿ ಅಳತೆ 5 ಎಕರೆ 6 ಗುಂಟೆ ಇರುವ ಈ 2 ಜಮೀನುಗಳು ಒಂದಕ್ಕೊಂದು ಲಗತ್ತಾಗಿದ್ದು ಒಂದೇ ಬದಿಯು ಇದ್ದು ಆ ಆಸ್ತಿಯ ಪೂರ್ವಕ್ಕೆ ಅಮರಾಪುರ ಗಡಿ, ಪಶ್ಚಿಮಕ್ಕೆ ಉಳಿದ ಭಾಗಸ್ಥರ ಜಮೀನು, ಉತ್ತರಕ್ಕೆ ಗೋವಿಂದಪ್ಪನವರ ಜಮೀನು, ದಕ್ಷಿಣಕ್ಕೆ ಇದೇ ಪೈಕಿ ಕೆ ಚನ್ನಬಸಪ್ಪ ರವರ ಜಮೀನು ನಮೂದು ಮಾಡಿರುವುದು ಕಂಡುಬರುತ್ತದೆ. ಆ ದಾವೆಯಲ್ಲಿ ವಿವಾದಾಂಶ ರಚಿಸುವ ಸಮಯದಲ್ಲಿ ನ್ಯಾಯಾಲಯವು ವಿವಾದಾಂಶ 2 ನ್ನು ಈ ಕೆಳಗಿನಂತೆ ರಚಿಸಿರುತ್ತಾರೆ.

> "Issue No.2: Whether the plaintiffs proves that, without having any right the first defendant and his father Channappa for himself and also on a minor guardian for 2nd and 3rd defendant in collusion with one Razak Sab, created the sale deed dated 28.06.1985 with regard to

suit schedule property behind the back of the plaintiffs which is void and not binding on the right of the plaintiffs as contended?"

22. ನ್ಯಾಯಾಲಯವು ಆ ದಾವೆಯಲ್ಲಿ ತೀರ್ಪನ್ನು ಘೋಷಿಸುವ ಸಮಯದಲ್ಲಿ ಆ ವಿವಾದಾಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸಿರುತ್ತದೆ. ವಾದಿಯು ಈ ದಾವೆಯಲ್ಲಿ ನಿಪಿ.3 ದಿಃ28.06.1985 ರ ಕ್ರಯ ಪತ್ರದ ಆಧಾರದ ಮೇಲೆ ದಾವಾ ಆಸ್ತಿಗೆ ಅವರನ್ನು ಮಾಲೀಕರೆಂದು ಘೋಷಣೆ ಮಾಡಬೇಕೆಂದು ಕೋರಿಕೊಂಡಿರುವುದು ಕಂಡುಬರುತ್ತದೆ.

23. ವಾದಿಯರು ಹಾಜರುಪಡಿಸಿದಂತಹ ನಿಪಿ.16 ದಿಃ30.04.1973 ರ ಪಾಲು ವಿಭಾಗದ ಧೃಡೀಕೃತ ನಕಲನ್ನು ಅವಲೋಕಿಸಿದಾಗ ಕೆ.ಚನ್ನಪ್ಪ ಬಿನ್ ಭೀಮೇಗೌಡ, ಕೆ ಚನ್ನಪ್ಪ ಬಿನ್ ಕೃಷ್ಣೇಗೌಡ, ಹನುಮಂತಪ್ಪ ಬಿನ್ ಚೆನ್ನಪ್ಪ, ಗೋಪಾಲಪ್ಪ ಬಿನ್ ಚನ್ನಪ್ಪ ಇವರುಗಳಿಗೆ ಸರ್ವೇ ನಂ.161 ರಲ್ಲಿ 36 ಎಕರೆ 26 ಗುಂಟೆ ಜಂಟಿಯಾಗಿ ಹಿಸ್ಸೆಗೆ ಬಂದಿರುತ್ತದೆ ಎನ್ನುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ ಅಲ್ಲದೇ ಸದರಿ ದಾಖಲಾತಿಯನ್ನು ಸೂಕ್ಷವಾಗಿ ಅವಲೋಕಿಸಿದಾಗ ಆ ದಾಖಲಾತಿಗಳಲ್ಲಿ ಅವರು ಸಹೋದರರ ಮಕ್ಕಳಾಗಿದ್ದು ಈ ಹಿಂದೆ 1966 ಮೇ 10 ರಲ್ಲಿ ಜುಬಾನಿಯಾಗಿ ವಿಭಾಗ ಮಾಡಿಕೊಂಡು ಅವರವರ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಕೆಲವು ಜಮೀನುಗಳು ಕ್ರಯಕ್ಕೆ ಕೊಟ್ಟಿದ್ದು ಉಳಿದ ತಕರಾರು ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನಮೂದು ಮಾಡಿರುತ್ತಾರೆ. ಇದನ್ನು ಗಮನಿಸಿದಾಗ ಸರ್ವೇ ನಂ.161 ರಲ್ಲಿ 36 ಎಕರೆ 26 ಗುಂಟೆ ಜಂಟಿಯಾಗಿ ನೀಡಿದ್ದರು ಸಹ 1966 ರಲ್ಲಿ ಅವರುಗಳು ಬಾಯಿ ಮಾತಿನ ಮೂಲಕ ಹಿಸ್ಸೆ ಮಾಡಿಕೊಂಡ ವಿಷಯವನ್ನು ಬರವಣಿಗೆ ರೂಪವನ್ನು ಕೊಟ್ಟಿರುವುದು 1973 ರಲ್ಲಿ ಎನ್ನುವುದು ತಿಳಿದು ಬಂದಿರುತ್ತದೆ.

24. ಓ.ಎಸ್ ನಂ.104/2005 ರ ತೀರ್ಪಿನಲ್ಲಿ ವಾದಿಯು ಆ ದಾವೆಯಲ್ಲಿ ಸಲ್ಲಿಸಿರುವ ನಿಪಿ.9 ರ ದಾಖಲಾತಿಗಳ ಪ್ರಕಾರ ಈ ಹಿಂದೆ ಜಮೀನು ಆಧಾರವಾಗಿದ್ದರು ಸಹ ಆ ಸರ್ವೇ ನಂಬರ್ ಗಳ ಮೇಲೆ ಯಾವ ವಿಧವಾದ ಸಾಲ ನೀಡಿರುವುದಿಲ್ಲ ಕಾರಣ ಅಮರಾಪುರದ ರಜಾಕ್ ಸಾಬ್ ರವರು ಸದರಿ ಜಮೀನಲ್ಲಿ ಸ್ವಾಧೀನ ಹೊಂದಿರುವುದಿಲ್ಲ ಆದ್ದರಿಂದ ಸಾಲ ಮಂಜೂರಾತಿ ತಡೆಹಿಡಿಯಲಾಗಿದೆ ಎಂದು ನಮೂದು ಮಾಡಿರುವುದು ಕಂಡುಬರುತ್ತದೆ ಹಾಗೂ ಈ ದಾವೆಯ ವಾದಿಯರು ಹಾಜರುಪಡಿಸಿದಂತಹ ನಿಡಿ.3 ಪಾಲು ವಿಭಾಗದಿಂದ ಸಿದ್ದವೀರಪ್ಪ ಬಿನ್ ನಂಜಪ್ಪ ಇವರಿಗೆ ಸ್ವತ್ತು ಮಾರಾಟ ಮಾಡಿರುವುದು ರುಜುವಾಗಿರುತ್ತದೆ ಆದ್ದರಿಂದ 1985 ರಲ್ಲಿ ಚನ್ನಪ್ಪ ಬಿನ್ ಭೀಮೇಗೌಡ ವಾದಿಯವರ ತಂದೆಗೆ 9 ಎಕರೆ 6 ಗುಂಟೆ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂಬುದನ್ನು ಸತ್ಯಕ್ಕೆ ದೂರವಾದ ವಿಷಯವೆಂದು ಅಂತಹ ಮಾರಾಟಕ್ಕೆ ಕಾನೂನಿನಲ್ಲಿ ಸ್ಥಾನಮಾನ ಇಲ್ಲವೆಂದು ಹಾಗೂ ಆ ದಾಖಲಾತಿಗಳು ವಾದಿಯರಿಗೆ ಮೋಸಮಾಡುವ ಸಲುವಾಗಿ ಮಾಡಿಕೊಟ್ಟ ದಾಖಲಾತಿಗಳು ಎಂದು ಅಭಿಪ್ರಯಿಸಿರುವುದು ಕಂಡುಬರುತ್ತದೆ.

25. ಆ ತೀರ್ಪಿನ ವಿರುದ್ಧ ಈ ದಾವೆಯ ವಾದಿಯರು ಹಿರಿಯ ಸಿವಿಲ್ ನ್ಯಾಯಾಲಯ ಹಿರಿಯೂರಿನಲ್ಲಿ ಆರ್.ಎ ನಂ.7/2008 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು ಆ ತೀರ್ಪು ಮತ್ತು ಡಿಕ್ರಿ ನಿಡಿ.3 ಮತ್ತು 4 ಆಗಿರುತ್ತದೆ ಆ ತೀರ್ಪಿನ ಪ್ರತಿಯನ್ನು ಗಮನಿಸಿದಾಗ ಮೇಲ್ಮನವಿ ನ್ಯಾಯಾಲಯವು ವಿಚಾರಣಾ ನ್ಯಾಯಾಲಯವು ಓ.ಎಸ್ ನಂ.104/2005 ರಲ್ಲಿ ಘೋಷಿಸಿರುವ ತೀರ್ಪನ್ನು ಎತ್ತಿ ಹಿಡಿದು ಆ ದಾವೆಯ ವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದರು ಎಂದು ಮತ್ತು ಮಾಲೀಕರಾಗಿದ್ದರೆಂದು ಘೋಷಣಾತ್ಮಕ ಆದೇಶವನ್ನು ಎತ್ತಿ ಹಿಡಿದಿರುತ್ತದೆ.

ಈ ತೀರ್ಪನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯವು ತಳ್ಳಿಹಾಕಿದ ಕುರಿತು ಯಾವುದೇ ದಾಖಲಾತಿಗಳನ್ನು ವಾದಿಯರು ಹಾಜರುಪಡಿಸಿರುವುದಿಲ್ಲ.

26. ಅಸಲು ದಾವಾ ನಂ.104/2005 ರಲ್ಲಿ ಪ್ರತಿವಾದಿಯವರು ತಮ್ಮ ವಾದ ಪತ್ರದಲ್ಲಿ ದಾವಾ ಆಸ್ತಿಯನ್ನು ಸಿದ್ದವೀರಪ್ಪ ಇವರಿಂದ ದಿನಾಂಕ 12.01.1967 ರಂದು ಖರೀದಿ ಮಾಡಿದ್ದ ಕ್ರಯ ಪತ್ರದ ಮೂಲಕ ಮಾಲೀಕರೆಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ. ನಿಪಿ.15 ದಾಖಲಾತಿಯನ್ನು ಗಮನಿಸಿದಾಗ ಆ ದಾಖಲಾತಿಯಲ್ಲಿ ದಿಃ12.01.1967 ಖಂಡೇನಹಳ್ಳಿ ವಾಸಿ ಭೀಮೇಗೌಡರ ಮಗ ಚನ್ನಪ್ಪನವರು ಸಿದ್ದವೀರಪ್ಪ ಬಿನ್ ನಂಜುಂಡಪ್ಪನವರಿಗೆ 161 ನೇ ಖುಷ್ಕಿ ಎಕರೆ 15 ಗುಂಟೆ ಅದರ ಚಕ್ಕುಬಂಧಿ ಪೂರ್ವಕ್ಕೆ ಅಮರಾಪುರದ ದಾರಿ, ಪಶ್ಚಿಮಕ್ಕೆ ಸರ್ವೇ ನಂ.164, ಉತ್ತರಕ್ಕೆ 159 ನೇ , ದಕ್ಷಿಣಕ್ಕೆ 162 ನ್ನು ದಿಃ12.01.1967 ರಲ್ಲಿ ಮಾರಾಟ ಮಾಡಿರುವುದು ಕಂಡುಬರುತ್ತದೆ. ನಿಡಿ.7 ರಿಂದ 9 ಸರ್ವೆ ನಂ.161 ರ ಪಹಣಿ ಪತ್ರಿಕೆಯಾಗಿದ್ದು ಆ ದಾಖಲಾತಿಯಲ್ಲಿ ಕಾಲಂ ನಂ.9 ರಲ್ಲಿ ಅಂಜನಗೌಡ , ಸಿದ್ದವೀರಪ್ಪ , ಚನ್ನಪ್ಪ , ಇವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ.

27. ನಿಡಿ.5 ಸಿದ್ದವೀರಪ್ಪ ಇವರ ವಂಶವೃಕ್ಷದ ನಕಲಾಗಿರುತ್ತದೆ ಆ ದಾಖಲಾತಿಯಲ್ಲಿ ಸಿ. ವೀರಪ್ಪ ಇವರ ಮಗಳು ನಿಂಗಮ್ಮ ಎಂದು, ನಿಂಗಮ್ಮ ನ ಮಕ್ಕಳು ಎಲ್ ಶಿವಕುಮಾರ, ಎಲ್ ನಾಗರಾಜ, ಎಲ್ ರವಿಕುಮಾರ ಮತ್ತು ಕೆ.ಎಲ್ ವಿರುಪಾಕ್ಷ ಎಂದು ನಮೂದು ಮಾಡಿರುವುದು ಕಂಡುಬರುತ್ತದೆ. ವಾದಿಯ ಪರ ಸಾಕ್ಷಿ ನುಡಿದಿರುವಂತಹ ಫ್ರಾಸಾ.2 ರವರು ಕೂಡ ತಮ್ಮ ಪಾಟೀ ಸವಾಲಿನಲ್ಲಿ ದಾವಾಸ್ತಿಯಲ್ಲಿ ವಾದಿಯರು ಸ್ವಾಧೀನದಲ್ಲಿದ್ದಾರೆ ಎನ್ನುವ ವಿಚಾರವನ್ನು ಅವರಿಗೆ 1 ನೇ ವಾದಿಯು ಹೇಳಿದ್ದು ಮತ್ತು ಪ್ರತಿವಾದಿಯರು ಅವರಿಗೆ ತೊಂದರೆ ಕೊಡುತ್ತಿದ್ದಾರೆಂದು 1 ನೇ ವಾದಿ ಹೇಳಿರುತ್ತಾರೆಂದು ನುಡಿದಿದ್ದು ಇದನ್ನು ಗಮನಿಸಿದಾಗ ಸಾಕ್ಷಿದಾರರಿಗೆ ಸ್ವಾಧೀನದ ಬಗ್ಗೆ

ಮಾಹಿತಿ ಇಲ್ಲವೆಂದು ಕಂಡು ಬರುತ್ತದೆ. ಓ.ಎಸ್.ನಂ.104/2005 ರಲ್ಲಿ ಈಗಾಗಲೇ ಪ್ರತಿವಾದಿಯರು ಸಲ್ಲಿಸಿದ ದಾವೆಯಲ್ಲಿ ಪ್ರತಿವಾದಿಯರ ತಾತ ಸಿದ್ದವೀರಪ್ಪ ದಿನಾಂಕ 12.01.1967 ರಂದು ನೊಂದಣಿ ಕ್ರಯ ಪತ್ರದ ಮೂಲಕ ಚನ್ನಪ್ಪ ಎನ್ನುವವರಿಂದ ಕ್ರಯ ಪತ್ರವನ್ನು ಹೊಂದಿದ್ದಾರೆಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ ಓ.ಎಸ್.ನಂ.104/2005 ರ ದಾವೆಯಲ್ಲಿ ರಜಾಕ್ ಸಾಬ್ ಇವರು ಈ ದಾವೆಯ ಪ್ರತಿವಾದಿ 1 ರಿಂದ 5 ರವರ ಗಮನಕ್ಕೆ ಬಾರದಂತೆ ಕ್ರಯ ಪತ್ರವನ್ನು ಸೃಷ್ಟಿಸಲ್ಪಟ್ಟಿದ್ದು ಎಂದು ತೀರ್ಮಾನಿಸಿ ಓ.ಎಸ್ ನಂ.104/2005 ರಲ್ಲಿ ಸಿದ್ದವೀರಪ್ಪ ಇವರು ಆಸ್ತಿಯನ್ನು ಖರೀದಿ ಮಾಡಿದ್ದರು ಎಂದು ಮತ್ತು ಅದೇ ದಿನ ಸ್ವಾಧೀನ ಪಡೆದುಕೊಂಡಿರುತ್ತಾರೆಂದು ಪ್ರತಿವಾದಿ 1 ರಿಂದ 5 ರವರು ಮಾಲೀಕರೆಂದು ತೀರ್ಮಾನಕ್ಕೆ ಬಂದಿರುತ್ತಾರೆ.

28. ಆರ್ ಎ ನಂ.7/2008 ರಲ್ಲೂ ಕೂಡ ಗೌರವಾನ್ವಿತ ನ್ಯಾಯಾಲಯವು 1967 ರ ಕ್ರಯಪತ್ರವು 30 ವರ್ಷ ಹಳೆಯ ದಾಖಲಾತಿಯಾಗಿದ್ದು ಆದ್ದರಿಂದ ಆ ದಾಖಲಾತಿ ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿನ ಪೂರ್ವ ಭಾವನೆಯ ಕಾನೂನುನನ್ನು ಪರಿಗಣಿಸುವುದು ಸೂಕ್ತ ವೆಂದು ಆದ್ದರಿಂದ ಕ್ರಯ ಪತ್ರ ವಾದ ಬಗ್ಗೆ ಕಾನೂನಾತ್ಮಕ ಪೂರ್ವ ಭಾವನೆಯನ್ನು ಹೊಂದ ಬಹುದೆಂದು ಹಾಗೂ ಆ ದಾಖಲಾತಿಯು ಪ್ರಶ್ನಿಸಲ್ಪಟ್ಟಿರುವುದಿಲ್ಲವೆಂದು ಆದ್ದರಿಂದ ಕಾನೂನುಬದ್ಧವಾದ ಪೂರ್ವ ಭಾವನೆಯನ್ನು ಹೊಂದಬಹುದೆಂದು ಪರಿಗಣಿಸಿ ಮೇಲ್ಮನವಿಯನ್ನು ವಜಾಗೊಳಿಸಿರುವುದು ಕಂಡು ಬರುತ್ತದೆ ಇಲ್ಲಿಯವರೆಗೂ ಕೂಡ ಆ ಕ್ರಯ ಪತ್ರವು ಶೂನ್ಯವಾಗಿದೆ ರದ್ದಾಗಿದೆ ಎಂದು ತೋರಿಸಲು ವಾದಿಯರು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಹಾಗೂ ಅಸಲು ದಾವಾ ಸಂಖ್ಯೆ.104/2005 ರ ತೀರ್ಪು ಮತ್ತು ಡಿಕ್ರಿಯು ಇದುವರೆಗೂ ತಳ್ಳಿ ಹಾಕಲ್ಪಟ್ಟಿರುವುದಿಲ್ಲ . ಆ ತೀರ್ಪಿನಲ್ಲಿ ಈಗಾಗಲೇ ತೀರ್ಮಾನವಾದ

ಅಂಶಗಳು ರದ್ದಾಗದೇ ಪುನಃ ಆ ಅಂಶಗಳನ್ನು ಸುಳ್ಳು ಎಂದು ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ ಆದ್ದರಿಂದ ಮೇಲೆ ವಿವರಿಸಿದ ಕಾರಣಗಳಿಂದ ವಾದಿಯರು ದಾವಾಸ್ತಿಯಲ್ಲಿ ಸ್ವಾಧೀನ ಹೊಂದಿ ದಿನಾಂಕ 28.06.1985 ರ ಕ್ರಯ ಪತ್ರದಂತೆ ಮಾಲೀಕರೆಂದು ಪುರಾವೆಗೊಳಿಸಲು ವಿಫಲರಾಗಿದ್ದಾರೆಂದು ಕಂಡು ಬಂದಿರುತ್ತದೆ ಆದ್ದರಿಂದ ಮೇಲೆ ವಿವರಿಸಿದ ಕಾರಣಗಳಿಂದ ವಿವಾದಾಂಶ 1 ನ್ನು ನಕಾರಾತ್ಮಕವಾಗಿ ಮತ್ತು 3 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

29. **ವಿವಾದಾಂಶ.2ಃ** ವಿವಾದಾಂಶ 1 ಮತ್ತು 3 ರಲ್ಲಿ ವಿವರಿಸಿದಂತೆ ಈಗಾಗಲೇ ದಾವಾ ಆಸ್ತಿಯಲ್ಲಿ ವಾದಿಯರು ತಾವು ದಾವಾ ಆಸ್ತಿಯಲ್ಲಿ ಸ್ವಾ ಧೀನದಲ್ಲಿ ಇದ್ದಾರೆ ಎಂಬುದನ್ನು ಪುರಾವೆಗೊಳಿಸಲು ವಿಫಲರಾಗಿರುತ್ತಾರೆ ಆದ್ದರಿಂದ ಪ್ರತಿವಾದಿಯವರು ವಾದಿಯ ಸ್ವಾಧೀನಕ್ಕೆ ಅಡ್ಡಿ ಆತಂಕಗಳ ಉಂಟು ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ . ಆದ್ದರಿಂದ ವಿವಾದಾಂಶ 2 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

30. **ವಿವಾದಾಂಶ.4 ಃ** ಪ್ರತಿವಾದಿಯವರು ದಾವಾ ಆಸ್ತಿಯು ಎಲ್ಲಾ ಅವಶ್ಯ ಪಕ್ಷಗಾರರನ್ನು ಹೊಂದದೆ ಊರ್ಜಿತವಾಗಿರುವುದಿಲ್ಲವೆಂದು ಖಂಡನೆಗೆ ತೆಗೆದುಕೊಂಡಿದ್ದು ಆದರೆ ವಾದಿಯು ಈ ದಾವೆಯನ್ನು ಪ್ರತಿವಾದಿಯವರ ವಿರುದ್ಧ ಮಾಲೀಕತ್ವದ ಘೋಷಣೆಯನ್ನು ಕೋರಿ ಸಲ್ಲಿಸಿದ್ದು ಈ ದಾವೆಯಲ್ಲಿ ತೀರ್ಮಾನಕ್ಕೆ ಬರಲು ಬೇರೆ ಯಾವುದೇ ಪಕ್ಷಗಾರರ ಅವಶ್ಯಕತೆ ಇರುವುದಿಲ್ಲ ಹಾಗೂ ಪ್ರತಿವಾದಿಯವರು ಈ ದಾವೆಯ ತೀರ್ಮಾನಕ್ಕೆ ಬರಲು ಯಾವ ಪಕ್ಷಗಾರರ ಅವಶ್ಯಕತೆ ಇದೆ ಎನ್ನುವ ಬಗ್ಗೆ ಯಾವುದೇ ವಿವರಣೆಯನ್ನು ಪ್ರತಿವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ . ಆದ್ದರಿಂದ ವಿವಾದಾಂಶ 4 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**31. ವಿವಾದಾಂಶ 5** ಃ ವಾದಿಯವರು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಘೋಷಣಾತ್ಮಕ ಆದೇಶವನ್ನು ಕೋರಿ ಸಲ್ಲಿಸಿದ್ದು ವಾದಿಯು ವಾದ ಪತ್ರದಲ್ಲಿ ಓ.ಎಸ್ ನಂ.104/2005 ಉಲ್ಲೇಖಿಸಿರುವ ಚಕ್ಕುಬಂಧಿ ಮತ್ತು ಕ್ರಯ ಪತ್ರ ದಿಃ12.01.1967 ರ ಕ್ರಯ ಪತ್ರದಲ್ಲಿ ಉಲ್ಲೇಖಿಸಿರುವ ಚಕ್ಕಬಂಧಿ ಬೇರೆ ಬೇರೆಯಾಗಿರುತ್ತದೆ ಎಂದು ಪ್ರತಿವಾದಿಯವರು ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆಂದು ಉಲ್ಲೇಖಿಸಿರುತ್ತಾರೆ.

ಭಾರತೀಯ ಕಾಲಪರಿಮಿತಿ ಅಧಿನಿಯಮ (Limitation Act, 1963) ರ ಅನುಚ್ಛೇದ 58 ರ ಪ್ರಕಾರ, ಘೋಷಣಾತ್ಮಕ ದಾವೆಗಳನ್ನು (Suit for Declaration) ಸಲ್ಲಿಸಲು 3 ವರ್ಷಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ. ದಾವೆ ಹೂಡುವ ಹಕ್ಕು ಮೊದಲ ಬಾರಿಗೆ ಯಾವಾಗ ಉದ್ಭವಿಸುತ್ತದೆಯೋ ಅಂದಿನಿಂದ ಈ ಮೂರು ವರ್ಷಗಳನ್ನು ಲೆಕ್ಕ ಹಾಕಲಾಗುತ್ತದೆ. ದಾವೆಗೆ ಕಾರಣವು (Cause of Action) ಅವಧಿ ಆರಂಭಗೊಳ್ಳುವ ದಿನ ಮೊದಲ ಬಾರಿಗೆ ಯಾವಾಗ ಉದ್ಭವಿಸುತ್ತದೆಯೋ, ಅಂದಿನಿಂದಲೇ ಕಾಲಾವಧಿ ಲೆಕ್ಕಕ್ಕೆ ಪ್ರಾರಂಭವಾಗುತ್ತದೆ. ಮೊದಲ ಬಾರಿಗೆ ಹಕ್ಕು ಚ್ಯುತಿಯಾದ ದಿನದಿಂದಲೇ 3 ವರ್ಷಗಳ ಅವಧಿಯೊಳಗೆ ದಾವೆಯನ್ನು ಸಲ್ಲಿಸಬೇಕಾಗುತ್ತದೆ

32. ಈ ದಾವೆಯ ಪ್ರತಿವಾದಿಯವರು ಈಗಾಗಲೇ ಓ.ಎಸ್ ನಂ.104/2005 ನ್ನು ಸಲ್ಲಿಸಿ ಆ ದಾವೆಯು 26.09.2008 ರಲ್ಲಿ ಡಿಕ್ರಿಯಾಗಿರುತ್ತದೆ. ವಾದಿಯು ಆ ದಾವೆಯಲ್ಲಿ ಪ್ರತಿವಾದಿಯಾಗಿದ್ದರೂ ಕೂಡ ಆ ದಾವೆ ತೀರ್ಮಾನವಾದ ನಂತರ ಸುಮಾರು 7 ವರ್ಷಗಳ ನಂತರ ಘೋಷಣಾತ್ಮಕ ಆದೇಶವನ್ನು ಕೋರಿದ್ದು ಆದ್ದರಿಂದ ವಾದಿಯು ಈ ದಾವೆಯನ್ನು ಕಾಲಪರಿಮಿತಿಯಡಿಯಲ್ಲಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಈ ದಾವೆಯು ಕಾಲಪರಿಮಿತಿ ಅಡಿಯಲ್ಲಿ

ಭಾದಿತವಾಗಿದೆ ಎಂದು ಈ ನ್ಯಾಯಾಲಯವು ಪರಿಗಣಿಸಿರುತ್ತದೆ. ಆದ್ದರಿಂದ ವಿವಾದಾಂಶ-5 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ .

33. **ವಿವಾದಾಂಶ.6ಃ** ವಿವಾದಂಶ 1 ಮತ್ತು 3 ರಲ್ಲಿ ವಿವರಿಸಿದಂತೆ ಈಗಾಗಲೇ ವಾದಿಯು ದಿಃ 28.06.1985 ಕ್ರಯ ಪತ್ರದ ಆಧಾರದ ಮೇಲೆ ದಾವಾಸ್ತಿಗೆ ಮಾಲೀಕರಾಗಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿದ್ದಾರೆಂದು ಪುರಾವೆಗೊಳಿಸಲು ವಿಫಲರಾಗಿರುವುದರಿಂದ ಅವರು ದಾವೆಯಲ್ಲಿ ಕೋರಿದ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಆದ್ದರಿಂದ ವಿವಾದಾಂಶ 6 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**34. ವಿವಾದಾಂಶ-7ಃ-** ಮೇಲೆ ವಿವರಿಸಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ವಾದಿಯ ದಾವೆಯನ್ನು ಖರ್ಚಿನೊಂದಿಗೆ ವಜಾಗೊಳಿಸಲಾಗಿದೆ.

ಇದೇ ರೀತಿ ಡಿಕ್ರಿ ಬರೆಯತಕ್ಕದ್ದು .

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕಃ 3 ನೇ ಜುಲೈ -2026 ರಂದು ಉದ್ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು .

## ಅನುಬಂಧ

I ವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ

ಪಿ.ಡಬ್ಲ್ಯೂ-1 ಃ ಅಬ್ದುಲ್ ಖಾದರ್

ಪಿ.ಡಬ್ಲ್ಯೂ-2 ಃ ಎನ್.ಡಿ ರಜ್ವಾನ್ ಸಾಬ್

II ವಾದಿಯರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ

| | | |
|---|---|---|
| ನಿ.ಪಿ-1 | ಃ | ಸರ್ವೇ ನಂ.161/1 ಡಿ3 ರ ಪಹಣಿ ಪತ್ರ, |
| ನಿ.ಪಿ-2 | ಃ | ಸರ್ವೇ ನಂ.161/1 ಬಿ ರ ಪಹಣಿ ಪತ್ರ, |
| ನಿ.ಪಿ-3 | ಃ | 28.06.1985 ರ ಕ್ರಯ ಪತ್ರದ ಧೃಡೀಕೃತ ಪ್ರತಿ |
| ನಿ.ಪಿ-4 | ಃ | ಸರ್ವೇ ನಂ.161/1 ಬಿ ರ ಪಹಣಿ ಪತ್ರದ ಧೃಡೀಕೃತ ಪ್ರತಿ |
| ನಿ.ಪಿ-5 ಮತ್ತು 6 | ಃ | ಮ್ಯುಟೇಶನ್ ರಿಜಿಸ್ಟರ್ ಧೃಡೀಕೃತ ಪ್ರತಿಗಳು |
| ನಿ.ಪಿ-7 | ಃ | ಋಣಭಾರ ಪ್ರಮಾಣ ಪತ್ರ |
| ನಿ.ಪಿ-8 | ಃ | ಆಕಾರ್ ಬಂದ್ ಧೃಡೀಕೃತ ಪ್ರತಿ, |
| ನಿ.ಪಿ-9 | ಃ | ಮರಣ ಪ್ರಮಾಣ ಪತ್ರ |
| ನಿ.ಪಿ-10 ರಿಂದ 13 | ಃ | ಕಂದಾಯ ರಶೀದಿಗಳು, |
| ನಿ.ಪಿ-14 | ಃ | ಸರ್ಕಾರಿ ಬಾಕಿ ಪಾವತಿಯ ರಶೀದಿ, |
| ನಿ.ಪಿ-15 | ಃ | ಕ್ರಯಪತ್ರ ದಿಃ 12.01.1967 |
| ನಿ.ಪಿ-16 | ಃ | ವಿಭಾಗ ಪತ್ರದ ದಿಃ30.04.1973 |
| ನಿ.ಪಿ-17 | ಃ | ಹಿಸ್ಸಾ ಟಿಪ್ಪಣಿ |

II ಪ್ರತಿವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ

ಡಿ.ಡಬ್ಲ್ಯೂ-1 ಃ ಎಲ್ ಶಿವಕುಮಾರ್

ಡಿ.ಡಬ್ಲ್ಯೂ-2 ಃ ಈಶ್ವರಪ್ಪ

IV ಪ್ರತಿವಾದಿಯರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ

| | | |
|---|---|---|
| ನಿ.ಡಿ-1 ಮತ್ತು 2 | ಃ | ಓ.ಎಸ್ ನಂ.104/2005 ತೀರ್ಪು ಮತ್ತು ಡಿಕ್ರಿಯ ಪ್ರತಿ, |
| ನಿ.ಡಿ-3 ಮತ್ತು 4 | ಃ | ಆರ್.ಎ ನಂ.7/2008 ರಂತೆ ಮೇಲ್ಮನವಿಯ, ತೀರ್ಪು ಮತ್ತು ಡಿಕ್ರಿ, |
| ನಿ.ಡಿ-5 | ಃ | ವಂಶವೃಕ್ಷ |
| ನಿ.ಡಿ-6 | ಃ | ರಸೀದಿ ಪಟ್ಟ |

ನಿ.ಡಿ-7 ರಿಂದ 10 ಃ ಸರ್ವೇ ನಂ.161 ರ ಪಹಣಿ ಪತ್ರಿಕೆಗಳು

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು .

Visit ecourts.gov.in for updates or download mobile app "eCourts Services" from Android or iOS

SUJATHA SUVARNA B

Digitally signed by SUJATHA SUVARNA B
Date: 2026.07.04 19:19:29 +0530